# ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ

**ಸಾಕ್ಷಿಗೆ ದಿನಾಂಕಃ 05-12-2025 ರಂದು ಪ್ರಮಾಣ ವಚನ ಬೋಧಿಸಲಾಯಿತು**

C.C.No. 867/2015

CW-11 PW-5

| | | |
|---|---|---|
| ಸಾಕ್ಷಿದಾರರ ಹೆಸರು | - | ಫರೀದ ಮಕ್ತುಮಸಾಬ ಜಮಾದಾರ |
| ವಯಸ್ಸು | - | 70 ವರ್ಷ |
| ಉದ್ಯೋಗ | - | ನಿವೃತ್ತ ಎ ಎಸ್ ಐ |
| ಸಾಕೀನ | - | ಸಪ್ತಸಾಗರ |

**ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

1) ನಾನು 2011 ರಿಂದ 2014 ರ ವರೆಗೆ ಗೋಕಾಕ ಶಹರ ಪೋಲಿಸ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2) ಈ ಪ್ರಕರಣಕ್ಕೆ ಸಂಬಧಿಸಿದಂತೆ ದಿಃ 24-12-2014 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಸಂಜೆ 06-00 ಗಂಟೆಗೆ ಚಾಸಾ 1 ರವರು ಠಾಣೆಗೆ ಹಾಜರಾಗಿ ಆರೋಪಿಗಳು ಮತ್ತು ಪಂಚನಾಮೆಯೊಂದಿಗೆ ದೂರನ್ನು ಸಲ್ಲಿಸಿದ್ದನ್ನು ಸ್ವೀಕರಿಸಿಕೊಂಡು ನಮ್ಮ ಠಾಣಾ ಮುಕದ್ದಮೆ ನಂಬರ 294/2012 ರ ಅಡಿ ಪ್ರಕರಣದ ದಾಖಲಿಸಿಕೊಂಡು ಪ್ರ.ವ.ವ. ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಮತ್ತು ನನ್ನ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ನಂತರ ಚಾಸಾ 4 ರಿದ 10 ರವರ

ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಚಾಸಾ 10 ರವರನ್ನು ಮಹಿಳಾ ವಸತಿ ಗೃಹ, ಹಿಡಿಕಲ್ ಡ್ಯಾಮ ರವರಲ್ಲಿ  ತಾತ್ಕಾಲಿಕ ಆಶ್ರಯಕ್ಕಾಗಿ ಕಳುಹಿಸಿಕೊಟ್ಟಿರುತ್ತೇನೆ. ಅದೇ ದಿನ ಚಾಸಾ 1 ರವರು ಠಾಣೆಗೆ ಹಾಜರು ಪಡಿಸಿದ್ದ  ಆರೋಪಿಗಳ ವಿರುದ್ಧ ದಸ್ತಗೀರ ಕ್ರಮ ಜರುಗಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಿಃ 11-02-2015 ರಂದು  ಪ್ರಾಪರ್ಟಿ ಕಾರ್ಡನ  ನಕಲನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡು ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಗಳ ವಿರುದ್ಧ ಸಾಕಷ್ಟು ಸಾಕ್ಷಾಧಾರಗಳು ಕಂಡು ಬಂದ ಕಾರಣ ದೋಷರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿ ನಿಪಿ-2 ರ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು, ಸಾಕ್ಷಿ ಪ್ರಥಮ ವರ್ತಮಾನ ವರದಿ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-3 ಎಂದು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು, ಸಾಕ್ಷಿ ದಿಃ 24-12-2014 ರಂದು ಮಹಿಳಾ ವಸತಿ ಗೃಹಕ್ಕೆ ನೀಡಿದ ನಿವೇದನೆ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-4 ಎಂದು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು, ಸಾಕ್ಷಿ ಪ್ರಾಪರ್ಟಿ ರಜಿಸ್ಟರ ಕಾರ್ಡ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-5 ಎಂದು ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು, ಸಾಕ್ಷಿ ಮುದ್ದೆಮಾಲು ಮೋಬೈಲನ್ನು ನೋಡಿ ಗುರುತಿಸಿದ್ದರಿಂದ ಅದನ್ನು ಮು.ಮಾ-1 ಎಂದು, ಸಾಕ್ಷಿ ಲಾಡ್ಜನ ರಜಿಸ್ಟರ ಪುಸ್ತಕವನ್ನು ನೋಡಿ ಗುರುತಿಸಿದ್ದರಿಂದ ಅದನ್ನು ಮು.ಮಾ-2 ಎಂದು, ಸಾಕ್ಷಿ ಮುದ್ದೆಮಾಲು ಮೋಬೈಲನ್ನು ನೋಡಿ ಗುರುತಿಸಿದ್ದರಿಂದ ಅದನ್ನು ಮು.ಮಾ-1 ಎಂದು, ಸಾಕ್ಷಿ ರೂ. 500/- ನೋಟನ್ನು ನೋಡಿ

ಗುರುತಿಸಿದ್ದರಿಂದ ಅದನ್ನು ಮು.ಮಾ–3 ಎಂದು, ಗುರುತಿಸಲಾಯಿತು. ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

1) ಮಹಾಲಕ್ಷ್ಮೀ ಲಾಡ್ಜ ನಮ್ಮ ಠಾಣೆಯಿಂದ 300 ಕಿ.ಮೀ ದೂರ ಇರುತ್ತದೆ ಎಂದರೆ ಸರಿ. ಸದರಿ ಲಾಡ್ಜ ಇರುವ ಸ್ಥಳ ಜನದಟ್ಟಣೆಯಿಂದ ಕೂಡಿರುತ್ತದೆ ಎಂದರೆ ಸರಿ. ನಾನು ಚಾಸಾ 1 ರವರಿಂದ ಪಂಚನಾಮೆಯನ್ನು ಸ್ವೀಕರಿಸುವ ಸಮಯದಲ್ಲಿ ಅದನ್ನು ಪರಿಶೀಲನೆ ಮಾಡಿರುತ್ತೇನೆ. ನಿಪಿ–1 ರಲ್ಲಿ ಚಾಸಾ 1 ರವರ ಸಹಿ ಇರುವುದಿಲ್ಲ ಎಂದರೆ ಸರಿ. ಮುದ್ದೆಮಾಲು 1 ರಿಂದ 3 ಕ್ಕೂ ಹಾಗೂ ಪ್ರಕರಣಕ್ಕೂ ಹಾಗೂ ಆರೋಪಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಆರೋಪಿ ತಮ್ಮ ಲಾಡ್ಜನಲ್ಲಿ ಪುಕ್ಕಟ್ಟೆಯಾಗಿ ರೂಮಗಳನ್ನು ನಮ್ಮ ಪೋಲಿಸ ಸಿಬ್ಬಂದಿಗಳಿಗೆ ಕೊಡದೆ ಇದ್ದಿದ್ದರಿಂದ, ಆ ವೈಷಮ್ಯಕ್ಕೆ ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿಕೊಂಡು, ಸುಳ್ಳು ಹೇಳಿಕೆಗಳನ್ನು ಸೃಷ್ಟಿಸಿಕೊಂಡು ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಪ್ರ.ದಿ.&ನ್ಯಾದಂ., ಗೋಕಾಕ.